# ಕಲಾತ್ಮಕ ಅಭಿವ್ಯಕ್ತಿಗೆ ಬೇಕು ಭಾರತೀಯ ಸಂಗೀತ ಮತ್ತು ನೃತ್ಯ

**ಜಯಮ್ಮ ಯಶವಂತಪ್ಪ ಡಿ.***

**DOI: https://doi.org/10.5281/zenodo.21793417**

**ABSTRACT**

ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಕಲೆಗಳು ಕೇವಲ ಮನರಂಜನೆಯ ಸಾಧನಗಳಾಗಿರದೆ, ಮಾನವನ ಬೌದ್ಧಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ ವಿಕಾಸಕ್ಕೆ ಕಾರಣವಾದ ಅತ್ಯಂತ ಪ್ರಾಚೀನ ಸಾಂಸ್ಕೃತಿಕ ಪರಂಪರೆಯಾಗಿವೆ. ವೇದಕಾಲದಿಂದ ಆರಂಭಗೊಂಡು, ರಾಮಾಯಣ, ಮಹಾಭಾರತ ಹಾಗೂ ಮೊಘಲರ ಕಾಲಘಟ್ಟಗಳಲ್ಲಿ ವಿಕಸನಗೊಂಡ ಈ ಕಲೆಗಳು, ಗಾಯನ, ವಾದನ ಮತ್ತು ನರ್ತನಗಳೆಂಬ ತ್ರಿವೇಣಿ ಸಂಗಮವನ್ನು ಪ್ರತಿನಿಧಿಸುತ್ತವೆ. ಭರತಮುನಿಯ 'ನಾಟ್ಯಶಾಸ್ತ್ರ'ದಂತಹ ಮೌಲಿಕ ಕೃತಿಗಳ ತಳಹದಿಯ ಮೇಲೆ ನಿಂತಿರುವ ಇವು ದೈವೀ ಸಾಕ್ಷಾತ್ಕಾರದ ಮಾರ್ಗಗಳೆಂದೇ ಪೂಜಿಸಲ್ಪಡುತ್ತವೆ. ಕಾಲಾನಂತರದಲ್ಲಿ ಅನೇಕ ಬದಲಾವಣೆಗಳಿಗೆ ತೆರೆದುಕೊಂಡರೂ, ಇವು ತಮ್ಮ ಮೂಲ ಸಂಪ್ರದಾಯವನ್ನು ಉಳಿಸಿಕೊಂಡಿವೆ. ಸ್ವಾತಂತ್ರ್ಯಾನಂತರದ ದಿನಗಳಲ್ಲಿ ಸಾಂಸ್ಥಿಕ ಬೆಂಬಲದೊಂದಿಗೆ ಜಾಗತಿಕ ಮಟ್ಟದಲ್ಲಿ ಅಪಾರ ಮನ್ನಣೆ ಪಡೆದಿರುವ ಈ ಕಲಾಪ್ರಕಾರಗಳು, ತಮ್ಮ ಜೀವಾಳಕ್ಕೆ ಚ್ಯುತಿ ಬಾರದಂತೆ ಸಮಕಾಲೀನ ಪ್ರಯೋಗಗಳಿಗೂ ಒಗ್ಗಿಕೊಂಡಿವೆ. ಭವಿಷ್ಯದ ಪೀಳಿಗೆಗೆ ಸ್ಫೂರ್ತಿಯಾಗಿರುವ ಸಂಗೀತ ಮತ್ತು ನೃತ್ಯಗಳು ಕಲಾತ್ಮಕ ಅಭಿವ್ಯಕ್ತಿಯ ಪ್ರಬಲ ಶಕ್ತಿಯಾಗಿ ಭಾರತದ ಭವ್ಯ ಪರಂಪರೆಯನ್ನು ಇಂದಿಗೂ ಜಗತ್ತಿಗೆ ಸಾರುತ್ತಿವೆ.

**KEYWORDS:** ಕಲಾತ್ಮಕ ಅಭಿವ್ಯಕ್ತಿ, ಭಾರತೀಯ ಶಾಸ್ತ್ರೀಯ ಸಂಗೀತ, ನೃತ್ಯ ಕಲೆ, ಸಾಂಸ್ಕೃತಿಕ ಪರಂಪರೆ, ನಾಟ್ಯಶಾಸ್ತ್ರ.

* **ಡಾ. ಜಯಮ್ಮ ಯಶವಂತಪ್ಪ ಡಿ.,** ಸಂಗೀತ ಉಪನ್ಯಾಸಕಿ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.

ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯವು ಭಾರತದ ಸಾಂಸ್ಕೃತಿಕ ಮತ್ತು ಆಧ್ಯಾತ್ಮಿಕತೆಯನ್ನು ರೂಪಿಸಿದ ಎರಡು ಅತ್ಯಂತ ಆಳವಾದ ಪ್ರಾಚೀನ ಕಲಾ ಪ್ರಕಾರಗಳೆಂದೇ ಗುರುತಿಸಿಕೊಂಡಿವೆ. ಶತಮಾನಗಳಷ್ಟೇ ಹಳೆಯದಾಗಿ ಬೇರೂರಿ ತನ್ನ ವ್ಯಾಪಕತೆಯನ್ನು ವಿಸ್ತರಿಸಿಕೊಂಡ ಈ ಕಲಾ ಪ್ರಕಾರಗಳು ಮಾನವನ ವ್ಯಕ್ತಿತ್ವದೊಂದಿಗೆ ವಿಕಸನಗೊಂಡಿವೆ. ಸಮೃದ್ಧ, ಸೌಂದರ್ಯ ಹಾಗೂ ಶ್ರೀಮಂತಿಕೆಯನ್ನು ಹೊಂದಿರುವ ಕಲಾತ್ಮಕ ಅಭಿವ್ಯಕ್ತಿಯ ಪರಂಪರೆಯನ್ನು ನಿರಂತರವಾಗಿ ಸಂರಕ್ಷಿಸುತ್ತಲೇ ಬಂದಿವೆ. ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯವು ಕೇವಲ ಮನರಂಜನೆಯ ರೂಪಗಳಲ್ಲ. ಅವುಗಳು ಕಲಾವಿದನನ್ನು ಮತ್ತು ಪ್ರೇಕ್ಷಕರನ್ನು ದೈವಿಕತೆಯತ್ತ ಕೊಂಡೊಯ್ಯುವ ಸಾಧನ ಮಾರ್ಗಗಳೆಂದು ಇಂದಿಗೂ ಪೂಜಿಸಲಾಗುತ್ತಿದೆ. ಇವುಗಳ ಮೂಲ, ಬೆಳವಣಿಗೆ ಸಮಾಜದ ಮೇಲೆ ಅತ್ಯಂತ ಜಾಗರೂಕತೆಯ ಪರಿಣಾಮವನ್ನುಂಟು ಮಾಡಿವೆ.

ಸಂಗೀತ ಮತ್ತು ನೃತ್ಯವು ಆತ್ಮಕ್ಕೆ ಚೈತನ್ಯವನ್ನು ಹಾಗೂ ಆನಂದದಾಯಕ ಪ್ರಜ್ಞೆಯಿಂದ ಪೋಷಿಸುತ್ತವೆ. ಗಾಯನ, ವಾದನ, ನೃತ್ಯ ಈ ಮೂರು ಕಲೆಗಳು ಯಾವಾಗಲೂ ಮಾನವನ ಜೀವನದಲ್ಲಿ ಮತ್ತು ನಾಗರೀಕತೆಯ ಬೆಳವಣಿಗೆಯಲ್ಲಿ ಬಹಳ ಮಹತ್ವದ ಪಾತ್ರವನ್ನು ವಹಿಸಿವೆ. ದೂರದರ್ಶನ, ಸರ್ಕಾರಿ ಸಮಾರಂಭಗಳು, ರಂಗಭೂಮಿ, ಚಲನಚಿತ್ರಗಳು, ಕ್ರೀಡೆಗಳು, ಆಚರಣೆಗಳು, ರಜಾ ದಿನಗಳು ಇವೆಲ್ಲವುಗಳು ಸಂಗೀತ ಮತ್ತು ನೃತ್ಯವು ನಮ್ಮ ದಿನನಿತ್ಯದ ಜೀವನದ ಅನಿವಾರ್ಯ ಸತ್ಯವೆಂಬ ಸತ್ಯಕ್ಕೆ ಪುರಾವೆಗಳಾಗಿ ನಮ್ಮೆದುರಿಗಿವೆ. ಆದಾಗ್ಯೂ ಮಗುವಿನ ಸರ್ವಾಂಗೀಣ ಬೆಳವಣಿಗೆಯಲ್ಲಿ ಸಂಗೀತ ಮತ್ತು ನೃತ್ಯ ಪ್ರಕಾರಗಳು ನಿರ್ಣಾಯಕ ಹಾಗೂ ಸಕಾರಾತ್ಮಕ ಪರಿಣಾಮ ಬೀರುವ ಅಗಾಧ ಸಾಮರ್ಥ್ಯವನ್ನು ಹೊಂದಿವೆ ಎಂದೇ ಹೇಳಬಹುದು. ಸಂಗೀತ ಮತ್ತು ನೃತ್ಯವು ಬೌದ್ಧಿಕ ಸಾಮರ್ಥ್ಯ, ಭಾವನಾತ್ಮಕ ಮತ್ತು ಸಾಮಾಜಿಕ ಸಾಮರ್ಥ್ಯವನ್ನು ನಿರ್ಮಿಸುತ್ತವೆ.

ಸಾಮಾನ್ಯವಾಗಿ ಸಂಗೀತವೆಂದರೆ ''ಹಾಡುವುದು'', ನೃತ್ಯ ಎಂದರೆ ''ಕುಣಿಯುವುದು'' ಎಂಬರ್ಥವಾಗುತ್ತದೆ. ಪುರಾತನರು ''ಗಾಯನ, ವಾದನ ಮತ್ತು ನೃತ್ಯ'' ಈ ಮೂರು ಕಲೆಗಳ ತ್ರಿವೇಣಿ ಸಂಗಮಕ್ಕೆ ಸಂಗೀತವೆಂದು ಕರೆದಿದ್ದಾರೆ. ಪಾಶ್ಚಿಮಾತ್ಯರು ಗಾಯನ ಮತ್ತು ವಾದನಕ್ಕೆ ಮಾತ್ರ ಸಂಗೀತವೆಂದಿದ್ದು ಅವರು ನೃತ್ಯ ಕಲೆಯನ್ನು ಪ್ರತ್ಯೇಕವಾದ ಒಂದು ಕಲೆಯೆಂದು ಹೇಳುತ್ತಾರೆ. ನಮ್ಮ ಪುರಾತನ ಸಂಗೀತ ಶಾಸ್ತ್ರಜ್ಞರು ಗಾಯನ, ವಾದನ ಹಾಗೂ ನೃತ್ಯ ಈ ಮೂರು ಕಲೆಗಳನ್ನು ಒಟ್ಟಿಗೆ ಸೇರಿಸಿ ಸಂಗೀತವೆಂದು ಕರೆದಿದ್ದರು ಮುಂದೆ ಕಾಲಕ್ರಮೇಣ ಈ ಮೂರು ಕಲೆಗಳು ಸ್ವತಂತ್ರ ಕಲಾ ಪ್ರಕಾರಗಳಾಗಿ ಬೆಳೆದು ಬಂದಿರುವುದನ್ನು ನಾವಿಲ್ಲಿ ಕಾಣಬಹುದು. (ಪ್ರೊ. ಎ.ಯು. ಪಾಟೀಲ್ ; ಸಂಗೀತ ಶಾಸ್ತ್ರ ದರ್ಪಣ, ಪು. ಸಂ. 1)

ಗಾಯನ, ವಾದನ ಮತ್ತು ನರ್ತನ ಈ ಮೂರು ಕಲೆಗಳು ಒಂದಕ್ಕೊಂದು ಪೂರಕ ಕಲೆಗಳಾಗಿ, ಒಂದನ್ನೊಂದು ಆಶ್ರಯಿಸಿಕೊಂಡು ಬೆಳೆದು ಬಂದಂತವುಗಳು.

ಈ ಮೂರು ಕಲೆಗಳಲ್ಲಿ ಆಂತರಿಕವಾದ ಮಧುರ ಸಂಬಂಧವಿದೆ. ಗಾಯನವು ವಾದನ ಮತ್ತು ನರ್ತನಕ್ಕೆ ಪೋಷಕವಾದರೆ ; ವಾದನವು ಗಾಯನ ಮತ್ತು ನರ್ತನಕ್ಕೆ; ನೃತ್ಯವು ಗಾಯನ ಮತ್ತು ವಾದನ ಕಲೆಗಳಿಗೆ ಪೋಷಕವಾಗಿದೆ. ಹಾಡುವಾಗ, ನುಡಿಸುವಾಗ ಮುಖಭಾವ ಪ್ರಮುಖವೆನಿಸಿದರೆ ; ನೃತ್ಯಕ್ಕೆ ಮೈ ಕೈ ಚಲನವಲನಗಳು ಅಂತರ್ಗತ ಸಂಗತಿಗಳಾಗಿವೆ.

ಸಂಗೀತ ಮತ್ತು ನೃತ್ಯವು ಕ್ರಿಯಾತ್ಮಕ ಪ್ರಾತ್ಯಕ್ಷಿಕೆಗೆ ಪ್ರಾಧಾನ್ಯತೆ ನೀಡುವ ಕಲೆಗಳಾಗಿವೆ. ಸಂಗೀತ ಮತ್ತು ವಾದನವು ಶ್ರವಣ, ಧ್ಯಾನ ಪ್ರಧಾನವಾಗಿದ್ದರೆ, ನೃತ್ಯವು ದೃಶ್ಯ ಪ್ರಧಾನವಾಗಿಯೂ ಇರುತ್ತದೆ. ನೃತ್ಯ ಮತ್ತು ಸಂಗೀತ ಭಾರತೀಯ ಸಂಗೀತ ಪರಂಪರೆಯ ಜೀವನಾಡಿ ಎನಿಸಿವೆ.

ಅನಾದಿಕಾಲದಿಂದಲೂ ನಾವು ದೇವರು, ಧರ್ಮ, ಪೂಜೆ, ಭಕ್ತಿ, ಕಾಯಕ, ದಾಸೋಹ, ಮುಕ್ತಿ ಶ್ರದ್ಧೆಗಳಲ್ಲಿ ವಿಶ್ವಾಸವನ್ನಿಟ್ಟುಕೊಂಡು ಬಂದಿದ್ದೇವೆ. ನಮ್ಮ ಪುರಾತನ ಋಷಿ ಮುನಿಗಳು ಸಂಗೀತದ ಮೂಲಕ ಲೌಕಿಕ ಮತ್ತು ಪಾರಮಾರ್ಥಿಕ ಜೀವನದ ಅರ್ಥವನ್ನು ಅರಿತುಕೊಂಡಿದ್ದು ಅವರ ದೃಷ್ಟಿಯಲ್ಲಿ ಸಂಗೀತವು ಶಿವನ ಸಾಕ್ಷಾತ್ಕಾರ ಎಂದು ನಂಬಿದ್ದರು. ಶಿವನನ್ನು ಕಾಣಲು ಸಂಗೀತವನ್ನು ಮಾರ್ಗವನ್ನಾಗಿ ಮಾಡಿ ಮಾರ್ಗೀಯ ಸಂಗೀತ ಎಂದರು. ಹೀಗಾಗಿ ಸಂಗೀತಕ್ಕೆ ಅಧ್ಯಾತ್ಮವು ಮುಖ್ಯ ಮೂಲಾಂಶವಾಗಿದೆ. ಆದ್ದರಿಂದ ಗಾಯನ, ವಾದನ, ನರ್ತನವನ್ನು ನಾವು ದೈವಿ ಭಕ್ತಿಯ ಕುರುಹುಗಳೆಂದು ನಂಬಿ ಅವುಗಳನ್ನು ಇಲ್ಲಿಯವರೆಗೆ ಭಕ್ತಿ ಪರಂಪರೆಯ ರೂವಾರಿಗಳಂತೆ ನಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದೇವೆ. (ಡಾ. ಜಯದೇವಿ ಜಂಗಮಶೆಟ್ಟಿ ; ಕೇಡಿಲ್ಲವಾಗಿ ಹಾಡುವೆ, ಪು.ಸಂ. 56)

ಭಾರತೀಯ ಶಾಸ್ತ್ರೀಯ ಸಂಗೀತದ ಇತಿಹಾಸವನ್ನು ನೋಡುವುದಾದರೆ ಸಂಗೀತ ಎಲ್ಲಾ ಕಲೆಗಳಿಗಿಂತ ಬಹಳ ಪ್ರಾಚೀನ ಎನ್ನುವುದು ಸತ್ಯ. ಸಂಗೀತದ ಪರಿಷ್ಕೃತ ರೂಪ ಕಾಲಕ್ರಮದಲ್ಲಿ ಆದರೂ ಅದರ ಆರಂಭ ಪ್ರಾಚೀನವಾದದ್ದು. ಭಾರತ ದೇಶ ಸಾಹಿತ್ಯ, ಸಂಗೀತ, ನೃತ್ಯ, ಸಂಸ್ಕೃತಿಯನ್ನು ಬಿಂಬಿಸುವ ಭವ್ಯ ಪರಂಪರೆಯುಳ್ಳ ದೇಶ. ಕಲೆಯು ಮನುಷ್ಯನ ಒಂದು ಸುಮಧುರ ಕಲ್ಪನೆಯಾಗಿದೆ. ಕಲೆಯ ನಿಜವಾದ ಉದ್ದೇಶ ಮನರಂಜನೆ ಮಾತ್ರವಲ್ಲ. ಸಂಗೀತ ಕೇಳುಗರಲ್ಲಿ ನಿರ್ವಿಕಾರ ಭಾವನೆಯು ವಿಕಾಸವಾಗುವಂತೆ ನೋಡಿಕೊಳ್ಳುವುದಾಗಿದೆ. ಸಂಗೀತವು ತನ್ನ ಸೃಜನಶೀಲತೆಯಿಂದ ಯಾವತ್ತೂ ಸೃಷ್ಟಿಶೀಲ ಎನಿಸಿಕೊಂಡಿದೆ. ಭಾರತೀಯ ಶಾಸ್ತ್ರೀಯ ಸಂಗೀತದ ಮೂಲವನ್ನು ವೈದಿಕ ಕಾಲದಿಂದ ಗುರುತಿಸಬಹುದು. ಅಲ್ಲಿ ಧಾರ್ಮಿಕ ಆಚರಣೆಗಳು ಮತ್ತು ಸಮಾರಂಭಗಳಲ್ಲಿ ಸಂಗೀತ ಪ್ರಮುಖ ಪಾತ್ರವಹಿಸಿತು. ನಾಲ್ಕು ವೇದಗಳಲ್ಲಿ ಒಂದಾದ ಸಾಮವೇದವು ಸಂಗೀತದ ಆರಂಭಿಕ ಮೂಲವೆಂದೇ ಹೇಳಲಾಗಿದೆ. ಭಾರತೀಯ ಸಂಗೀತದ ಮೂಲವನ್ನು ವೇದ ಕಾಲದೊಂದಿಗೆ ಸಮೀಕರಿಸಲಾಗಿದೆ. ಹದಿನಾಲ್ಕನೇ ಶತಮಾನದಲ್ಲಿ ಮೊಘಲರ ಆಗಮನ ಭಾರತೀಯ ಸಂಸ್ಕೃತಿಗಳಲ್ಲಿ ಹಲವಾರು ಬದಲಾವಣೆಗಳಿಗೆ

ಕಾರಣವಾಯಿತು. ಪಾರಂಪರಿಕ ಸಂಗೀತ ಪರಂಪರೆ, ಮೊಘಲರ ಆಳ್ವಿಕೆಯಲ್ಲಿ ಸ್ವರ, ಸಾಹಿತ್ಯ ಹೀಗೆ ಶಾಸ್ತ್ರದಲ್ಲಿಯೂ ಬದಲಾವಣೆಯಾಯಿತು. ಈ ಎರಡು ಪದ್ಧತಿಗಳು ಕವಲೊಡೆಯುವ ಮುಂಚೆಯೇ ಭಾರತೀಯ ಸಂಗೀತವೆಂದೆನಿಸಿಕೊಳ್ಳುತ್ತಿದ್ದ ಸಂಗೀತ ; ಭೋಗ ಮತ್ತು ಶೃಂಗಾರ ಪ್ರಧಾನ ವಿಚಾರಗಳಿಂದ ಬೇರ್ಪಟ್ಟು ಉತ್ತರಾಧಿ ಸಂಗೀತ ಎಂದೆನಿಸಿಕೊಂಡಿತು. ಈಗಿನ ದಕ್ಷಿಣಾದಿ ಭಾರತೀಯ ಸಂಗೀತದ ಚೌಕಟ್ಟಿನಲ್ಲಿಯೇ ಉಳಿದುಕೊಂಡಿತು. ಭವ್ಯ ಭಾರತದಲ್ಲಿ ಸಂಗೀತದ ಇತಿಹಾಸದಲ್ಲಿ ಸಂಗೀತ ಅತ್ಯಂತ ಪ್ರಬಲವಾಗಿ ಬೆಳೆಯಲು ಕರ್ನಾಟಕದಲ್ಲಿ ಶಾಸ್ತ್ರೀಯ ಸಂಗೀತದ ಬೀಜವನ್ನು ಬಿತ್ತಿದವರು ಮೈಸೂರು ಕೃಷ್ಣರಾಜ ಒಡೆಯರವರು. ಅಷ್ಟೆ ಅಲ್ಲ ಈ ಪರಂಪರೆಗೆ ಗಟ್ಟಿಯಾಗಿ ನೆಲೆ ನಿಲ್ಲಲು ಬಿಜಾಪುರದ ಎರಡನೆಯ ಇಬ್ರಾಹಿಂ ಆದಿಲ್ ಷಾನೂ ಕಾರಣನಾಗಿದ್ದಾನೆ.

ಭಾರತೀಯ ಶಾಸ್ತ್ರೀಯ ಸಂಗೀತದ ಬೇರುಗಳು ಸುಮಾರು ಆರು ಸಾವಿರ ವರ್ಷಗಳ ಹಿಂದೆಯೇ ವೈದಿಕ ಗ್ರಂಥಗಳಲ್ಲಿ ಉಲ್ಲೇಖಗೊಂಡಿವೆ. ಅಲ್ಲಿ ಮಂತ್ರಗಳು ಸಂಗೀತದ ಸ್ವರಗಳಲ್ಲಿ ಪಠನೆ ಮಾಡಲಾಗುತ್ತಿತ್ತು. ಮುಂದುವರೆದು ಮಧ್ಯಕಾಲೀನ ಯುಗದಲ್ಲಿ ದೆಹಲಿ ಸುಲ್ತಾನರು ಮತ್ತು ಮೊಘಲರ ಆಳ್ವಿಕೆಯ ಕಾಲದಲ್ಲಿ ಸಂಗೀತವು ಹೆಚ್ಚು ಸಂಕೀರ್ಣವಾಗತೊಡಗಿತು. ಇದರೊಟ್ಟಿಗೆ ಪರ್ಶಿಯನ್ ಸಂಪ್ರದಾಯಗಳ ಪ್ರಭಾವದಿಂದ ಹೊಸ ಶೈಲಿಗಳು ರೂಪುಗೊಂಡವು. ಭಾರತದ ಗಿಳಿ ಎಂದೇ ಪ್ರಸಿದ್ಧರಾದ ಅಮಿರ್ ಖುಸ್ರೋ ಅವರು ಈ ಯುಗದಲ್ಲಿ ಪ್ರಮುಖ ಪಾತ್ರ ವಹಿಸಿದರು. ಇನ್ನು ಆಧುನಿಕ ಯುಗದಲ್ಲಿ 1900 ರ ಸುಮಾರಿಗೆ ಪಂಡಿತ, ವಿಷ್ಣುನಾರಾಯಣ ಭಾತಖಂಡೆ ಹಾಗೂ ಪಂಡಿತ. ವಿಷ್ಣು ದಿಗಂಬರ ಪಲುಸ್ಕರ್ ಅವರು ಸಂಗೀತವನ್ನು ಸಾರ್ವತ್ರೀಕರಣಗೊಳಿಸಿದರು. ಹೀಗೆ ಭಾರತೀಯ ಶಾಸ್ತ್ರೀಯ ಸಂಗೀತದ ಇತಿಹಾಸವನ್ನು ಅತ್ಯಂತ ಆಳಕ್ಕಿಳಿದು ವಿಶ್ಲೇಷಿಸದೆ ಕೇವಲ ಸಂಕ್ಷಿಪ್ತ ಇತಿಹಾಸವನ್ನು ಇಲ್ಲಿ ಹೇಳಲಾಗಿದೆ.

ಭಾರತೀಯ ಸಂಸ್ಕೃತಿಯ ಅವಿಭಾಜ್ಯ ಅಂಗಗಳಾದ ಸಂಗೀತ ಮತ್ತು ನೃತ್ಯವು ಸಾವಿರಾರು ವರ್ಷಗಳಿಂದ ವಿಕಸನಗೊಂಡಿರುವ ಶ್ರೀಮಂತ ಮತ್ತು ವೈವಿಧ್ಯಮಯ ಪರಂಪರೆಯಾಗಿವೆ. ಭಾರತೀಯ ಸಂಗೀತದ ಮೂಲವನ್ನು ಆರು ಸಾವಿರ ವರ್ಷಗಳಷ್ಟು ಹಿಂದಿನ ಪವಿತ್ರ ವೇದಗಳಲ್ಲಿ ವಿಶೇಷವಾಗಿ ಸಾಮವೇದದಲ್ಲಿ ಕಾಣಬಹುದು. ಮುಂದೆ ಭರತ ಮುನಿ ಬರೆದ "ನಾಟ್ಯಶಾಸ್ತ್ರ" ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ ಸಂಪ್ರದಾಯಗಳೆರಡಕ್ಕೂ ಮೂಲಭೂತ ಗ್ರಂಥವೆನಿಸಿದೆ. ಸಂಗೀತ ಮತ್ತು ನೃತ್ಯ ಕಲೆಗಳು ಭಾರತೀಯ ಪರಂಪರೆಯ ಜೀವ ನಾಡಿಗಳಾಗಿ ಮುಂದುವರೆದಿವೆ.

ಭಾರತೀಯ ನೃತ್ಯದ ಇತಿಹಾಸವನ್ನು ವೇದಕಾಲ ಪೂರ್ವ ಎಂದರೆ ಸಿಂಧೂ ನಾಗರಿಕತೆಯ ಕಾಲಕ್ಕೆ ಗುರುತಿಸಬಹುದು. ಮೆಹೆಂಜೋದಾರೋ ಮತ್ತು ಹರಪ್ಪಾದಲ್ಲಿ ಉತ್ಖನನದ ಸಮಯದಲ್ಲಿ ದೊರೆತ ನೃತ್ಯ ಪ್ರತಿಮೆಗಳಿಂದ ಆ ಕಾಲದ ಜನರ

ಸಾಮಾಜಿಕ ಜೀವನದಲ್ಲಿ ನೃತ್ಯವು ಪ್ರಮುಖ ಸ್ಥಾನವನ್ನು ಹೊಂದಿತ್ತು ಮತ್ತು ಅವರು ಆ ಕಲೆಯಲ್ಲಿ ಸಾಕಷ್ಟು ಪರಿಣತರಾಗಿದ್ದರು. ಕ್ರಿ.ಪೂ. 5000 – 9000 ದ ಅವಧಿಯಲ್ಲಿ ಭಾರತೀಯ ಜನರಿಗೆ ಸಂಗೀತ ಮತ್ತು ನೃತ್ಯದ ಜ್ಞಾನವಿತ್ತು ಎಂಬುದನ್ನು ಪ್ರಸಿದ್ಧ ಇತಿಹಾಸಕಾರ ಫೆಡಿಸ್ ಕೂಡ ಒಪ್ಪಿಕೊಂಡಿದ್ದಾರೆ.

ಭರತ ಮುನಿಯಿಂದ ರಚಿಸಲ್ಪಟ್ಟ ನಾಟ್ಯಶಾಸ್ತ್ರ ಗ್ರಂಥವು ಭಾರತೀಯ ಶಾಸ್ತ್ರೀಯ ನೃತ್ಯಕ್ಕೆ ಭದ್ರಬುನಾದಿ ಎನಿಸಿದೆ. ಈ ಪ್ರಾಚೀನ ಗ್ರಂಥವು ನಾಟ್ಯ (ನಾಟಕ), ನೃತ್ಯ (ಅಭಿವ್ಯಕ್ತ ನೃತ್ಯ ) ತತ್ವಗಳನ್ನು ವಿವರಿಸುತ್ತದೆ. ನೃತ್ಯವನ್ನು ಹೊರತು ಪಡಿಸಿ ನೃತ್ಯದ ಉಳಿದ ಪ್ರಕಾರಗಳಿಗೆ ಅತ್ಯಗತ್ಯ ಮಾರ್ಗದರ್ಶಿಯಾಗಿದೆ. ಭಾರತದ ಶಾಸ್ತ್ರೀಯ ನೃತ್ಯ ಪ್ರಕಾರಗಳಾದ : ಭರತನಾಟ್ಯ, ಕಥಕ್ (ಉತ್ತರಪ್ರದೇಶ), ಒಡಿಸ್ಸಿ (ಒಡಿಶಾ), ಕಥಕ್ಕಳಿ (ಕೇರಳ), ಕೂಚಿಪುಡಿ (ಆಂಧ್ರಪ್ರದೇಶ), ಮಣಿಪುರಿ (ಮಣಿಪುರ), ಮೋಹಿನಿಯಾಟ್ಟಂ (ಕೇರಳ) ಮತ್ತು ಸತ್ರಿಯಾ (ಅಸ್ಸಾಂ) ಸೇರಿದಂತೆ ಈ ಎಲ್ಲಾ ನೃತ್ಯ ಪ್ರಕಾರಗಳು ತಮ್ಮದೇ ಆದ ವಿಶಿಷ್ಟ ಶೈಲಿಯನ್ನು ಹೊಂದಿದ್ದು, ಭಾರತದ ವೈವಿಧ್ಯಮಯ ಸಾಂಸ್ಕೃತಿಕ ಪರಂಪರೆಯನ್ನು ಎತ್ತಿ ಹಿಡಿದಿವೆ. ಅಲ್ಲದೆ ಸಾಂಸ್ಕೃತಿಕ ಪರಂಪರೆಯನ್ನು ಸಂರಕ್ಷಿಸುವಲ್ಲಿ ಸಂಗೀತ ಮತ್ತು ನೃತ್ಯ ಕಲೆಗಳು ನಿರ್ಣಾಯಕ ಪಾತ್ರವಹಿಸಿವೆ.

ವೈದಿಕ ಯುಗದಲ್ಲಿ ಭಾರತೀಯ ನೃತ್ಯವು ಹೊಸ ತಿರುವು ಪಡೆದುಕೊಂಡಿತು. ನೃತ್ಯ ಎಂಬ ಪದವನ್ನು ವಿವಿಧ ಸ್ಥಳಗಳಲ್ಲಿ ಉಲ್ಲೇಖಿಸಲಾಯಿತು. ಈ ಯುಗದ ಋಷಿಗಳು ನೃತ್ಯ ಕಲೆಯ ಬಗ್ಗೆ ಚೆನ್ನಾಗಿ ಅರಿತವರಾಗಿದ್ದರು. ಪ್ರೊ. ಅಲಾಗ್ ರಿಟಾರ್ನ್ ಅವರು ಹೇಳುವಂತೆ ‘‘ಈ ಯುಗದಲ್ಲಿ ಮೂರು ವಿವಿಧ ಕಲಾವಿದರು ಅಂದರೆ ಗಾಯಕರು, ನರ್ತಕರು ಮತ್ತು ವಾದಕರು ಇದ್ದರು. ಸಾರ್ವಜನಿಕ ಪ್ರದರ್ಶನಗಳು ಕೂಡ ಜರುಗುತ್ತಿದ್ದವು’’. ಹೀಗೆ ವೇದ ಕಾಲದಲ್ಲಿ ನೃತ್ಯವು ಒಂದು ಪ್ರಮುಖ ಸಾಮಾಜಿಕ ಚಟುವಟಿಕೆಯಾಗಿತ್ತು.

ಆರ್ಯರ ಕಾಲದಲ್ಲಿ ನೃತ್ಯವನ್ನು ಯೋಗಕ್ಕೆ ಸರಿ ಹೊಂದುವಂತೆ ಜೋಡಿಸಿ ಕಲಿಯುವುದನ್ನು ಸರಳಗೊಳಿಸಿದರು ಮತ್ತು ಅದಕ್ಕೆ ಆಧ್ಯಾತ್ಮಿಕ ಅರ್ಥವನ್ನು ನೀಡಿದರು. ಮಾನಸಿಕ ಸ್ಥಿತಿಯನ್ನು ಬಲ ಪಡಿಸಲು ನೃತ್ಯಾಭ್ಯಾಸವನ್ನು ಬಳಸಿದರು. ಈ ಕಾಲದಲ್ಲಿ ಸೌಂದರ್ಯವನ್ನು ನೃತ್ಯದ ತಾಯಿ ಎಂದು ಪರಿಗಣಿಸಲಾಯಿತು.

ರಾಮಾಯಣ ಕಾಲದಲ್ಲಿ ನೃತ್ಯವು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿತ್ತು. ಈ ಕಾಲದಲ್ಲಿ ಉನ್ನತ ಮತ್ತು ಕೆಳಸ್ತರದ ಜನರ ಸಂಗೀತದ ಮೂರು ಕಲೆಗಳಾದ ಹಾಡುಗಾರಿಕೆ, ನೃತ್ಯ, ವಾದ್ಯ ನುಡಿಸುವಿಕೆಯಲ್ಲಿ ಪರಿಣತಿ ಹೊಂದಿದ್ದರು. ರಾಮನು ಸಂಗೀತ, ವಾದನ ಮತ್ತು ಚಿತ್ರಕಲೆಯಲ್ಲೂ ನಿಪುಣನಾಗಿದ್ದನು. ಲಂಕೆಯ ರಾಜ ರಾವಣನು ಸಹ ಹಾಡು ಮತ್ತು ನೃತ್ಯದ ಮೂಲಕ ಶಿವನನ್ನು ಪೂಜಿಸುತ್ತಿದ್ದನು. ಅವನ ಪತ್ನಿ ಮಂಡೋದರಿ ಅರಮನೆಯ ಇತರ ಮಹಿಳೆಯರು ಎಲ್ಲಾ ರೀತಿಯ ಕಲೆಗಳಲ್ಲಿ ನಿಪುಣರಾಗಿದ್ದರು. ಹೀಗಾಗಿ ಈ ಯುಗದಲ್ಲಿ ಹಾಡುಗಾರಿಕೆ ಮತ್ತು ನೃತ್ಯ ಇತ್ಯಾದಿ ಕಲೆಗಳು ಗಮನಾರ್ಹ ಪ್ರಗತಿ ಮತ್ತು ಸುಧಾರಣೆಯನ್ನು ಸಾಧಿಸಿದವು.

ಮಹಾಭಾರತ ಕಾಲದಲ್ಲಿ ನೃತ್ಯವು ಸಮಾಜದ ಎಲ್ಲಾ ವರ್ಗದವರು ನೃತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡು, ಅಭಿವೃದ್ಧಿ ಹೊಂದಿದ್ದಲ್ಲದೆ ನೃತ್ಯಗಾರರ ಸಂಖ್ಯೆಯೂ ಬಹಳ ದೊಡ್ಡದಾಗಿ ಬೆಳೆದಿತ್ತು. ಮುಂದುವರೆದು ಬೌದ್ಧರ, ರಜಪೂತರ, ಮೊಘಲರ ಆಳ್ವಿಕೆಯಲ್ಲಿ ಪ್ರಗತಿಯತ್ತ ಸಾಗಿ ಬಂದ ಈ ಕಲೆಗಳು ಮೊಘಲ್ ಅವಧಿಯಲ್ಲಿ ಅಕ್ಬರನ ಆಳ್ವಿಕೆಯಿಂದ ಪ್ರಾರಂಭವಾಗಿ ಷಹಜಹಾನ್ ಆಳ್ವಿಕೆಯ ಅಂತ್ಯದವರೆಗಿನ ಅವಧಿಯನ್ನು ನಂತರದ ಮಧ್ಯಯುಗವೆಂದು ಕರೆಯಲಾಗುತ್ತದೆ. ಇಬ್ಬರು ಸಹ ಲಲಿತ ಕಲೆಗಳ ಪ್ರಿಯರಾಗಿದ್ದರು.

ಹೀಗೆ ಸಂಗೀತ ಮತ್ತು ನೃತ್ಯದ ಇತಿಹಾಸವನ್ನು ಕಾಲಾನುಕ್ರಮದಲ್ಲಿ ಸಂಕ್ಷಿಪ್ತವಾಗಿ ಹೇಳುವುದಾದರೆ : ಪ್ರಾಚೀನ ಯುಗದಲ್ಲಿ ; ಸಂಗೀತವು – ವೈದಿಕ ಪಠಣಗಳು, 'ರಾಗ' ಮತ್ತು 'ತಾಳ'ಗಳ ಮೂಲವನ್ನು ಕಂಡುಕೊಂಡರೆ, ನೃತ್ಯವು – 'ನಾಟ್ಯಶಾಸ್ತ್ರ'ದಲ್ಲಿ ಉಲ್ಲೇಖದಂತೆ ದೇವಾಲಯಗಳಲ್ಲಿ ದೇವದಾಸಿ ಸಂಸ್ಕೃತಿಯಲ್ಲಿ ಭರತನಾಟ್ಯವನ್ನು ಕಂಡುಕೊಂಡಿತು. ನಂತರ ಮಧ್ಯಕಾಲೀನ ಯುಗದಲ್ಲಿ ; ಸಂಗೀತವು – ಮೊಘಲ್ ಪ್ರಭಾವ, ಅಮಿರ್ ಖುಸ್ರೋ ಅವರ ಕೆಲಸ, 'ಘರಾನಾ'ಗಳ ಉಗಮವು ಕಂಡು ಬಂದರೆ ನೃತ್ಯದಲ್ಲಿ – ಕಥಕ್ ನೃತ್ಯವು ನ್ಯಾಯಾಲಯಗಳಲ್ಲಿ ಪ್ರದರ್ಶನ, ವಿವಿಧ ನೃತ್ಯ ಶೈಲಿಗಳ ವಿಕಸನವು ಈ ಯುಗದಲ್ಲಿ ಬೆಳವಣಿಗೆಯಾಯಿತು. ತದನಂತರ ಆಧುನಿಕ ಯುಗದಲ್ಲಿ ; ಸಂಗೀತವನ್ನು ಔಪಚಾರಿಕಗೊಳಿಸುವುದು, 'ಗಂಧರ್ವ ಮಹಾವಿದ್ಯಾಲಯ' ಸ್ಥಾಪನೆ ಅಂತೆಯೇ ನೃತ್ಯದಲ್ಲಿ – ಅಕಾಡೆಮಿಗಳಿಂದ ಬೆಂಬಲ, ಸಾರ್ವಜನಿಕರಲ್ಲಿ ಜನಪ್ರಿಯತೆಯನ್ನು ಕಂಡುಕೊಂಡಿತು. ಹೀಗೆ ಸಂಗೀತ ಮತ್ತು ನೃತ್ಯದ ಇತಿಹಾಸವು ಕಾಲ ಕ್ರಮೇಣ ಬೆಳವಣಿಗೆಯತ್ತ ಸಾಗಿಬಂದು ಇಂದು ವ್ಯಾಪಕ ಸ್ವತಂತ್ರ ಕಲೆಗಳಾಗಿ ಬೇರೂರಿವೆ.

ಸ್ವತಂತ್ರ ಪೂರ್ವದಲ್ಲಿ ಹಾಗೂ ಸ್ವತಂತ್ರ ಬಂದ ನಂತರ ಎದುರಾದ ಸವಾಲುಗಳ ಹೊರತಾಗಿಯೂ ಸಮರ್ಪಕ ಕಲಾವಿದರು ವಿದ್ವಾಂಸರ ಪ್ರಯತ್ನಗಳಿಂದಾಗಿ ಈ ಕಲಾ ಪ್ರಕಾರಗಳು ಉಳಿದುಕೊಂಡಿವೆ ಮತ್ತು ಅಭಿವೃದ್ಧಿಯತ್ತ ಹೆಜ್ಜೆ ಹಾಕಿವೆ. ಪ್ರಸ್ತುತದಲ್ಲಿ ಸರ್ಕಾರ ಹಾಗೂ ಸಂಘ – ಸಂಸ್ಥೆಗಳು ನಡೆಸುವ ಉತ್ಸವಗಳು ಈ ಕಲಾ ಪ್ರಕಾರಗಳನ್ನು ಉತ್ತೇಜಿಸುವ ಮತ್ತು ಸಂರಕ್ಷಿಸುವ ಮೂಲಕ ಶಾಸ್ತ್ರೀಯ ಸಂಗೀತ ಮತ್ತು ನೃತ್ಯದಲ್ಲಿ ಆಸಕ್ತಿಯು ಹುಟ್ಟುವಂತೆ ಮಾಡಿವೆ. ಇತ್ತೀಚಿನ ದಿನಗಳಲ್ಲಿ ಭಾರತೀಯ ಶಾಸ್ತ್ರೀಯ ಸಂಗೀತ ಮತ್ತು ನೃತ್ಯವು ಜಾಗತಿಕ ಮಟ್ಟದಲ್ಲಿ ಸೈ ಎನಿಸಿಕೊಂಡತವುಗಳು. ಜಾಝ್, ರಾಕ್ ಮತ್ತು ಎಲೆಕ್ಟ್ರಾನಿಕ್ ಸಂಗೀತದೊಂದಿಗೆ ಭಾರತೀಯ ಶಾಸ್ತ್ರೀಯ ಸಂಗೀತದ ಮಿಶ್ರಣವು ಅಭಿವ್ಯಕ್ತಿಯ ಹೊಸ ಪ್ರಕಾರಗಳನ್ನು ಸೃಷ್ಟಿಸಿದೆ. ಹೊಸ ಪ್ರಯೋಗಗಳ ನಡುವೆಯೂ ಬೆಳೆದು ಬಂದ ಸಂಪ್ರದಾಯಕ್ಕೆ ಧಕ್ಕೆಯಾಗದಂತೆ ಆ ಸಂಪ್ರದಾಯದ ಸಾರವನ್ನು ಉಳಿಸಿಕೊಂಡು ಸಮಕಾಲೀನ ಪ್ರೇಕ್ಷಕರನ್ನು ಮತ್ತು ಶ್ರೋತೃಗಳನ್ನು ಆಕರ್ಷಿಸುತ್ತಿವೆ. ಈ ಎರಡು ಕಲಾ ಪ್ರದರ್ಶನಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರದರ್ಶನಗೊಂಡು ಇಂದು ಭಾರತದ ಕಲಾತ್ಮಕ ಪರಂಪರೆಯ ಶ್ರೀಮಂತಿಕೆಯನ್ನು ಜಗತ್ತಿಗೆ ಪ್ರದರ್ಶಿಸುತ್ತಿವೆ.

ಭಾರತೀಯ ನೃತ್ಯಗಳು ಜನಸಾಮಾನ್ಯರಲ್ಲಿ ಒಂದಾದವು. ದೇಶದ ವಿವಿಧೆಡೆ ನೃತ್ಯಗಳ ಬೋಧನೆಗೆ ಸಂಸ್ಥೆಗಳು, ಶಾಲೆಗಳು, ವಿಶ್ವವಿದ್ಯಾಲಯಗಳಲ್ಲಿ ನೃತ್ಯವನ್ನು ಒಂದು ವಿಷಯವಾಗಿ ಪರಿಚಯಿಸಲಾಯಿತು. ಸ್ವಾತಂತ್ರ್ಯೋತ್ತರದಲ್ಲಿ ಭಾರತೀಯ ಶಾಸ್ತ್ರೀಯ ನೃತ್ಯ ಶೈಲಿಗಳ ಪ್ರಸ್ತುತಿ, ಮೇಕಪ್, ಉಡುಗೆ – ತೊಡುಗೆ, ಸಂಗೀತ ವಾದ್ಯಗಳ ಬಳಕೆ, ಬೆಳಕು ಮತ್ತು ಧ್ವನಿಯಲ್ಲಿ ಬಹಳಷ್ಟು ಬದಲಾವಣೆಗಳಾಗಿವೆ. ಅಷ್ಟೆಯಲ್ಲದೇ ನೃತ್ಯಗಳ ಕುರಿತು ಅನೇಕ ಹಿಂದಿ, ಇಂಗ್ಲೀಷ್, ಕನ್ನಡ ಭಾಷೆಗಳಲ್ಲಿ ಅನೇಕ ಆಕರಗಳು ಲಭ್ಯವಿದೆ.

1954 ರಲ್ಲಿ ಕೇಂದ್ರ ಸರ್ಕಾರವು ಸಂಗೀತ ನಾಟಕ ಅಕಾಡೆಮಿಯನ್ನು ಸ್ಥಾಪಿಸಿತು. ಇದು ಸಂಗೀತ, ನೃತ್ಯ ಮತ್ತು ನಾಟಕಕ್ಕೆ ಸಂಬಂಧಿಸಿದ ಸಂಪ್ರದಾಯಗಳ ರಕ್ಷಣೆಗೆ ಮತ್ತು ಅವುಗಳ ಬೆಳವಣಿಗೆಗೆ ಗಣನೀಯ ಕೊಡುಗೆ ನೀಡಿದೆ. ಅಕಾಡೆಮಿಯು ಅನೇಕ ಕಾರ್ಯಕ್ರಮಗಳನ್ನು ಆಯೋಜಿಸಿ ಕಲಾವಿದರಿಗೆ ಆರ್ಥಿಕ ನೆರವು ನೀಡಿ ಅವರನ್ನು ಗೌರವಿಸುತ್ತಿದೆ. ಹೀಗೆ ಬೆಳವಣಿಗೆಯತ್ತ ಸಾಗತೊಡಗಿದ ಸಾಮಾನ್ಯ ಜನರ ಮನೆಗಳನ್ನು ಸಹ ಪ್ರವೇಶಿಸಿವೆ. ಅಲ್ಲದೆ ಸಮಾಜದಲ್ಲಿ ಗೌರವ, ಸ್ಥಾನಮಾನವನ್ನು ಕಲ್ಪಿಸಿ ಕೊಟ್ಟಿದೆ ಇದರಿಂದ ನೃತ್ಯ ಕಲಿಯುವುದರಲ್ಲಿ ಹೆಮ್ಮೆಯ ಭಾವನೆಯನ್ನು ಕಂಡುಕೊಂಡಿದ್ದಾರೆ.

ಸಂಗೀತ ಮತ್ತು ನೃತ್ಯ ಕಲೆಗಳು ಶಾಸ್ತ್ರೀಯ ಕಲೆಗಳಲ್ಲಿ ಹೆಚ್ಚು ವ್ಯಾಪಕವಾಗಿ ಬೆಳೆದು ನಿಂತಿವೆ. ಅಲ್ಲದೆ ಭವಿಷ್ಯದ ಮುಂದಿನ ಪೀಳಿಗೆಗೆ ಸ್ಪೂರ್ತಿಯಾಗಿ ಮತ್ತು ಇಂದಿನ ಆಧುನಿಕ ತಂತ್ರಜ್ಞಾನ ಯುಗದಲ್ಲಿ ಅವುಗಳ ಪ್ರಸ್ತುತತೆಯನ್ನು ಉಳಿಸಿಕೊಂಡು ಉನ್ನತ ಸ್ಥಾನದಲ್ಲಿವೆ. ಕಲಾತ್ಮಕ ಅಭಿವ್ಯಕ್ತಿಗೆ ಸದಾ ಶಕ್ತಿಯಾಗಿ ನಿಂತ ಈ ಪ್ರಕಾರಗಳು ವೈವಿಧ್ಯಮಯ ಪರಂಪರೆಗಳಾಗಿ ಪ್ರತಿಧ್ವನಿಸುತ್ತಿವೆ.

**ಪರಾಮರ್ಶನ ಗ್ರಂಥಗಳು:**


1. ಕಪಿಲ ವಾತ್ಸ್ಯಾಯನ, (1974), ಇಂಡಿಯನ್ ಕ್ಲಾಸಿಕಲ್ ಡಾನ್ಸ್, ದೆಹಲಿ: ಮಿನಿಸ್ಟರಿ ಆಫ್ ಇನ್‌ಫಾರ್ಮೇಶನ್ ಆಂಡ್ ಬ್ರಾಡ್‌ಕಾಸ್ಟಿಂಗ್ ಗೌರ್ನಮೆಂಟ್ ಆಫ್ ಇಂಡಿಯಾ.
2. ಠಾಕೂರ್ ಜಯದೇವ ಸಿಂಗ್ ಮತ್ತು ಪ್ರೇಮಲತಾ ಶರ್ಮಾ, (1995), ಇಂಡಿಯನ್ ಮ್ಯೂಸಿಕ್, ಕಲ್ಕತ್ತ: ಸಂಗೀತ ರಿಸರ್ಚ್ ಅಕಾಡೆಮಿ.
3. ವಿವೇಕ ಕುಮಾರ್ ಪಾಂಡೆ ಮತ್ತು ಶಂಭುನಾಥ, ಡಾನ್ಸ್ ವಿಥ್ ಮ್ಯೂಸಿಕ್.
4. ಆದ್ಯ ರಂಗಾಚಾರ್ಯ, (1984), ನಾಟ್ಯಶಾಸ್ತ್ರ, ಹೆಗ್ಗೋಡು (ಸಾಗರ): ಅಕ್ಷರ ಪ್ರಕಾಶನ.
5. ಪಾಟೀಲ್ ಎ.ಯು., (1974), ಸಂಗೀತ ಶಾಸ್ತ್ರ ದರ್ಪಣ, ಧಾರವಾಡ: ಕನ್ನಡ ಅಧ್ಯಯನ ಪೀಠ ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ.
6. ಜಯದೇವಿ ಜಂಗಮಶೆಟ್ಟಿ, (2016), ಕೇಡಿಲ್ಲವಾಗಿ ಹಾಡುವೆ, ಚೆನ್ನಪಟ್ಟಣ: ಪಲ್ಲವ ಪ್ರಕಾಶನ.